ಸರ್ಕಾರದ ಪರವಾಗಿ ಶಿಕ್ಷಣ ಸಚಿವನಾಗಿ ನಾನು ಹೇಳುವುದು ಏನೆಂದರೆ, ವೇತನ ಅನುದಾನ ಕೊಡುವ ಪ್ರಕ್ರಿಯೆಯನ್ನು ನಾವು ಮುಂದುವರೆಸುತ್ತೇವೆ. ನೀವು ನಿಮ್ಮ ಹೋರಾಟವನ್ನು ಕೈಬಿಟ್ಟು, ಶೈಕ್ಷಣಿಕ ಚಟುವಟಿಕೆಯಲ್ಲಿ ತಾವು ತೊಡಿಗಿಸಿಕೊಳ್ಳಬೇಕು ಎಂದು ವಿನಂತಿಯನ್ನು ಮಾಡಿಕೊಳ್ಳುತ್ತೆನೆ. ಸರ್ಕಾರ ಅವರ ಪರವಾಗಿ ಇದೆ. ತಾತ್ಕಾಲಿಕವಾಗಿ ಬಂದಂತಹ ಈ ತೊಂದರೆಯಿಂದಾಗಿ, ತಾತ್ಕಾಲಿಕವಾಗಿ ಈ ತೊಂದರೆಗಳು ಆಗಿದೆ. ಆದರೆ, ಈ ತೊಂದರೆಯನ್ನು ಅದಷ್ಟು ಶೀಘ್ರದಲ್ಲಿ ನಾವು ಬಗೆಹರಿಸುತ್ತೇವೆ. ಅವರಿಗೆ ವೇತನ ಅನುದಾನಕ್ಕೆ ಒಳಪಡಿಸುತ್ತೇವೆ. ಹಾಗಾಗಿ ಅವರು ಹೋರಾಟವನ್ನು ಕೈಬಿಟ್ಟು, ಅವರು ಶೈಕ್ಷಣಿಕ ಚಟುವಟಿಕೆಯಲ್ಲಿ ತೊಡಗಿಕೊಳ್ಳಬೇಕು, ಮಕ್ಕಳಿಗೆ ಪಾಠವನ್ನು ಉತ್ತಮವಾಗಿ ಹೇಳಿಕೊಡುವುದಕ್ಕೆ ಅವರು ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದು ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ.

ಊ) ವಿಷಯ : ಕೆರಕನಹಳ್ಳಿ ಗ್ರಾಮ ಪ್ರವಾಹದಿಂದ ಜಲಾವೃತವಾಗುವುದನ್ನು ತಪ್ಪಿಸಲು ಆ ಗ್ರಾಮವನ್ನು ಸ್ಥಳಾಂತರಗೊಳಿಸುವ ಬಗ್ಗೆ.

ಶ್ರೀ ಮಾಲೀಕಯ್ಯ ಗುತ್ತೇದಾರ್ (ಅಫ್‌ಜಲ್‌ಪುರ್): ಮಾನ್ಯ ಅಧ್ಯಕ್ಷರೆ, ಒಂದು ಪ್ರಶ್ನೆಯನ್ನು ನಾನು Zero Hour ನಲ್ಲಿ ಪ್ರಸ್ತಾವನೆ ಮಾಡಿದ್ದೆ. ಅಫ್‌ಜಲ್‌ಪುರ ತಾಲ್ಲೂಕಿನ ಕೆರಕನಹಳ್ಳಿ ಎನ್ನುವಂತಹ ಗ್ರಾಮವು ಭೀಮಾ ನದಿ ಮತ್ತು ಅಮರ್ಜಾ ನದಿ ಪ್ರವಾಹ ಬಂದಾಗ ಪ್ರತಿ ವರ್ಷ,..... ಸನ್ಮಾನ್ಯ ಸುರೇಶ್‌ರವರೆ, ನನ್ನ ಪ್ರಶ್ನೆಯನ್ನು ಯಾರು ಕೇಳುತ್ತಿದ್ದಾರೆ ಗೊತ್ತಿಲ್ಲ. ಸರ್ಕಾರದವರು ಯಾರು ಕೇಳುತ್ತಿದ್ದಾರೆ? ಉತ್ತರ ಯಾರು ಕೊಡುವುದು? ಸನ್ಮಾನ್ಯ ಮುಖ್ಯಮಂತ್ರಿಗಳೆ, ತಾವು ದಯವಿಟ್ಟು ಕೇಳಬೇಕು. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಒಂದು ನಿಮಿಷ ಕೇಳಿದರೆ ತಮಗೆ ಅರ್ಥವಾಗುತ್ತದೆ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳೆ, ನಿನ್ನೆಯದ್ದು ಪ್ರಸ್ತಾಪ ಮಾಡುತ್ತಿದ್ದಾರೆ.

ಶ್ರೀ ಮಾಲೀಕಯ್ಯ ಗುತ್ತೇದಾರ್: ಪ್ರತಿ ವರ್ಷ flood ಬರುವುದರಿಂದ ಕೆರಕನಹಳ್ಳಿ ಗ್ರಾಮವನ್ನು ಸ್ಥಳಾಂತರಿಸಲು ಈಗಾಗಲೇ ಅಲ್ಲಿಯ ರೈತರು ಜಮೀನನ್ನು free ಆಗಿ ಕೊಟ್ಟಿದ್ದಾರೆ. ಶೋಭಾ ಕರಂದ್ಲಾಜೆಯವರು ಆರ್.ಡಿ.ಪಿ.ಆರ್. ಮಂತ್ರಿಗಳಾಗಿದ್ದಾಗ ಅವರಿಗೆ ಸನ್ಮಾನವನ್ನು ಕೂಡ ಮಾಡಿದ್ದಾರೆ. ಆದರೆ ನಿಮ್ಮ ಅಧಿಕಾರಿಗಳ ನಿರ್ಲಕ್ಷ್ಯತನದಿಂದ ಆ ಗ್ರಾಮವು shifting villageನಲ್ಲಿ ಬಿಟ್ಟು ಹೋಗಿದೆ. ಅದಕ್ಕಾಗಿ ನಾನು ಒಂದು ಪತ್ರವನ್ನೂ ಕೊಟ್ಟಿದ್ದೆ. ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟು ಕೂಡಲೆ ಗ್ರಾಮವನ್ನು shift ಮಾಡುವಂಥ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ನಾಳೆ ಮತ್ತೆ flood ಆಗಿ ಜಲಾವೃತವಾಗುತ್ತದೆ. ಆ ಗ್ರಾಮಕ್ಕೆ ನಾವು ಮತ್ತು ಕೇಂದ್ರ ಸಚಿವರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ರೇವೂ ನಾಯಕ್‌ರವರು ಬೋಟ್‌ನಲ್ಲಿ ಹೋಗಿ ಅವರಿಗೆ ಆಹಾರ ಧಾನ್ಯವನ್ನು supply ಮಾಡಿದ್ದೇವೆ. ದಯವಿಟ್ಟು ತಾವು ಇದನ್ನು ಗಂಭೀರವಾಗಿ ಪರಿಗಣಿಸಿ ಕೂಡಲೆ ಅಧಿಕಾರಿಗಳಿಗೆ ಆದೇಶ ಕೊಟ್ಟು ಕೆರಕನಹಳ್ಳಿ ಗ್ರಾಮವನ್ನು shift ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಹೋದ ವರ್ಷ ನೆರೆ ಬಂದ ಸಂದರ್ಭದಲ್ಲಿ ಯಾವ್ಯಾವ ಗ್ರಾಮಗಳಲ್ಲಿ ನಾವು shift ಮಾಡಿದ್ದೇವೆಯೋ ಆ ಪಟ್ಟಿಯಲ್ಲಿ ಇದ್ದರೆ....

ಶ್ರೀ ಮಾಲೀಕಯ್ಯ ಗುತ್ತೇದಾರ್: ಆ ಪಟ್ಟಿಯಲ್ಲಿ ಈ ಗ್ರಾಮವು ಬಿಟ್ಟು ಹೋಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಪಟ್ಟಿಯಲ್ಲಿ ಬಿಟ್ಟು ಹೋಗಿದ್ದರೆ, ಡಿ.ಸಿ. ಯವರಿಂದ ವರದಿಯನ್ನು ತರಿಸಿಕೊಂಡು ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಮಾಲೀಕಯ್ಯ ಗುತ್ತೇದಾರ್: ಪಟ್ಟಿಯಲ್ಲಿ ಇಲ್ಲದಿದ್ದ ಕಾರಣವೇ ನಾವು ಇಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿರುವುದು Genuine ಇದೆಯೋ ಇಲ್ಲವೋ ಎನ್ನುವುದನ್ನು ಪರೀಕ್ಷೆ ಮಾಡಿ ಕೊಡಿ.

ಶ್ರೀ. ಬಿ.ಎಸ್. ಯಡಿಯೂರಪ್ಪ: ಆ ಊರಿನ ಜನ ಬೇರೆ ಕಡೆ ಜಮೀನು ಕೊಟ್ಟಿರುವ ಕಡೆ, ಮನೆಯನ್ನು ಕಟ್ಟಿಸಿಕೊಂಡು ಹೋಗುವುದಕ್ಕೆ ತಯ್ಯಾರಿದ್ದಾರೆಯೇ?

ಶ್ರೀ ಮಾಲೀಕಯ್ಯ ಗುತ್ತೇದಾರ್: ತಯಾರಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಸರಿ ಮಾಡಿಸಿಕೊಡುತ್ತೇನೆ.

(4. ನಿಯಮ 69ರ ಮೇರೆಗೆ ಮುಂದುವರೆದ ಚರ್ಚೆ)

ಸನ್ಮಾನ್ಯ ಲೋಕಾಯುಕ್ತರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಬಗ್ಗೆ

ಅಧ್ಯಕ್ಷರು: ನಿಯಮ 69ರಡಿಯಲ್ಲಿ ಚರ್ಚೆ. ಮಾನ್ಯ ರೇವಣ್ಣನವರು ತಾವು ಪ್ರಾರಂಭಿಸುವುದಕ್ಕೆ ಮುಂಚೆ, ನಿಯಮ 69ರಡಿಯಲ್ಲಿ ಸಾರ್ವಜನಿಕ ಜರೂರು ವಿಷಯದ ಬಗ್ಗೆ ಕಳೆದ ನಾಲ್ಕು ದಿನಗಳಿಂದ ಈ ಸದನದಲ್ಲಿ ಚರ್ಚೆ ನಡೆಯುತ್ತಿದೆ. ಈ ವಿಷಯದ ಬಗ್ಗೆ 4.30 ಗಂಟೆಗಳ ಕಾಲ ಈ ದಿವಸ ಸಮಯಾವಕಾಶವನ್ನು ಹಂಚಿಕೆ ಮಾಡಲಾಗಿದೆ. ಅದರಂತೆ ವಿವಿಧ ಪಕ್ಷಗಳಿಗೆ ಈ ಕೆಳಕಂಡಂತೆ ಸಮಯವನ್ನು ನಿಗದಿ ಮಾಡಲಾಗಿದೆ.

ಕಾಂಗ್ರೆಸ್ ರವರಿಗೆ–2.00 ಗಂಟೆ, ಜೆ.ಡಿ.(ಎಸ್)ರವರಿಗೆ 1.00 ಗಂಟೆ ಬಿ.ಜೆ.ಪಿ.ಯವರಿಗೆ–1 ಗಂಟೆ 30 ನಿಮಿಷ ಒಟ್ಟು 4 ಗಂಟೆ 30